ಸೇವನೆ ಮಾಡುತ್ತಿದ್ದರು; ಸ್ತ್ರೀಸಹವಾಸಿಗಳು; ಅವರ ದೇವತೆ ಮಾಕಾಳಿಗೆ ಕೆಂಪುಕಣ್ಣು, ಉದ್ದನೆಯ ಕೋರೆದಾಡೆ, ಕೊರಳಲ್ಲಿ ತಲೆಬುರುಡೆಗಳ ಹಾರ. ಮೈಬಣ್ಣ ಅಚ್ಚಗಪ್ಪಾದರೂ ಉಟ್ಟವಸ್ತ್ರಗಳ ಬಣ್ಣ ಮಾತ್ರ ಕೆಂಪು. ಈ ದೇವತೆಯನ್ನು ಭಕ್ತರು ಮಂಗಳವಾರ ಮತ್ತು ಶುಕ್ರವಾರಗಳ ರಾತ್ರಿ ಕೆಂಪು ಹೂ ಮತ್ತು ಮಂತ್ರಗಳಿಂದ ಅರ್ಚಿಸುತ್ತಿದ್ದರು. ಇದನ್ನು ಗಮನಿಸಿದರೆ ದಸರಾ ಹಬ್ಬದ ಬೇರುಗಳು ಕೌಳಪಂಥದಲ್ಲಿಯೂ ಇದ್ದಂತೆ ಕಾಣುತ್ತದೆ.

## ಮಾನೌಮಿ ಪದಗಳು

ಕರ್ನಾಟಕದಲ್ಲಿ ಮಹಾನವಮಿ ಹಬ್ಬಕ್ಕಾಗಿಯೇ ಒಂದು ಜನಪದ ಹಾಡಿಕೆ ಪ್ರಕಾರ ಹುಟ್ಟಿಕೊಂಡಿದೆ. ಈ ಪ್ರಕಾರದ ಹಾಡುಗಳನ್ನು 'ಮಾನೌಮಿ ಪದಗಳು', 'ಮಾನ್ರ್ನಮಿ ಪದಗಳು' ಎಂದು ಕರೆಯುತ್ತಿದ್ದರು. ಬ್ರಿಟಿಷರು ಶಾಲೆಗಳನ್ನು ತೆರೆಯುವ ಮುನ್ನ, ಸರ್ಕಾರಿ ಶಾಲೆಗಳು ಆರಂಭವಾಗುವ ಮೊದಲು ಹಳ್ಳಿಗಳಲ್ಲಿ 'ಕೂಲಿಮಠ'ಗಳಿದ್ದವು. ಆಗಿನ್ನೂ ಹುಡುಗಿಯರು ಕಲಿಯುವಂತಿರಲಿಲ್ಲ. ಹುಡುಗರಿಗೆ ಮಾತ್ರ ಕಲಿಸುವಾತ 'ಓದಯ್ಯ'ನೇ ಮೇಷ್ಟ್ರು. 'ಓದಯ್ಯ' ಎಂದರೆ ಓದಿಸುವ ಅಯ್ಯ. ಈಗಲೂ ಗುರುತಾಗಿ ಓದಯ್ಯರ ಮನೆತನಗಳಿವೆ. ಈತನಿಗೆ ತಿಂಗಳ ಸಂಬಳವಿಲ್ಲ. ವರ್ಷಕ್ಕಿಷ್ಟು ಹಣ, ಧಾನ್ಯವೆಂದು ಒಪ್ಪಂದವಾಗುತ್ತಿತ್ತು. ಈತನಿಗೆ ಹಳ್ಳಿಯಲ್ಲಿ ಬಹಳ ಗೌರವ. ಹಗಲು ಮಠವಾದರೆ, ರಾತ್ರಿ ಜನರಿಗೆ ಯಾವುದಾದರೂ ಪುರಾಣವನ್ನು ಓದಿ ಹೇಳುವುದು ಅಥವಾ ಭಜನೆ ಮಾಡುವುದು ನಿತ್ಯದ ಕೆಲಸವಾಗಿತ್ತು. ನವರಾತ್ರಿ ಹಬ್ಬ ಬರುವ ಮುಂಚೆ ಓದಯ್ಯ ತನ್ನ ಮಠದ ಹುಡುಗರಿಗೆ ಮಾನವಮಿ ಪದಗಳನ್ನು ರೂಢಿ ಮಾಡಿಸುತ್ತಿದ್ದ. ಈ ಮಕ್ಕಳ ತಂದೆ ತಾಯಿಗಳು 'ನಮ್ಮುಡುಗ ಮಾನ್ರ್ನಮಿ ಆಡ್ತಾನೆ' ಎಂದು ಖುಷಿಪಡುತ್ತಿದ್ದರು. ಮಕ್ಕಳಿಗೆ ಮಾನೌಮಿ ಪದ ಹಾಡಲೆಂದೇ ಹೊಸ ಬಟ್ಟೆ ಹೊಲಿಸುತ್ತಿದ್ದರು. ಸಾಧಾರಣವಾಗಿ ಮಕಮಲ್ಲು ಟೋಪಿ, ನಿಕ್ಕರು, ಷರಟು, ಕೋಟು ಮತ್ತು ಮೇಲೆ ಹಾಕಿಕೊಳ್ಳಲು ಒಂದು ಶಲ್ಯ – ಇದು ಆ ಹುಡುಗರ ಉಡುಪು. ಪ್ರತಿಯೊಬ್ಬ ಹುಡುಗನ ಕೈಲೂ ಬಣ್ಣದ ಕೋಲು. ಉದ್ದನೆಯ ಕೋಲುಗಳಿಗೆ ಬಣ್ಣದ ಕಾಗದಗಳನ್ನು ಸುತ್ತಿ ಅವನ್ನು ಹುಡುಗರಿಗೆ ಕೊಡುತ್ತಿದ್ದರು. ಈ ಉಡುಪನ್ನು ಹಾಕಿಕೊಂಡು, ಬಣ್ಣದ ಕೋಲನ್ನು ಹಿಡಿದು ನಿಂತ ತಮ್ಮ ಮಕ್ಕಳು ಮಾನೌಮಿ ಪದಗಳನ್ನು ಹಾಡುತ್ತಿದ್ದರು. ಈ ಹುಡುಗರನ್ನು ಓದಯ್ಯನವರು ತಮ್ಮ ಗ್ರಾಮದಲ್ಲಿ ಮನೆ ಮನೆಗೂ ಕರೆದುಕೊಂಡು ಹೋಗುತ್ತಿದ್ದರು. ಇದಕ್ಕೆ 'ಊರಾಡುವುದು' ಎನ್ನುತ್ತಿದ್ದರು. ಪ್ರತಿ ಮನೆಯಲ್ಲಿಯೂ ಬಾಲಕರು ಹರಕೆಯ ಪದಗಳನ್ನು ಹಾಡುತ್ತಿದ್ದರು. ನಿಮಗೆ ಶುಭವಾಗಲಿ, ಸಮೃದ್ಧಿಯಾಗಲಿ, ನಿಮ್ಮ ಮನೆ ಬೆಳೆಯಲಿ, ತಂಪಾಗಿರಲಿ ಎಂದು ಈ ಬಾಲಕರು ಹಾಡಿ ಹಾರೈಸುತ್ತಿದ್ದರು.

ಕಡಲೆ ಬೆಲ್ಲವು ಕೊಬರಿ ನಮಗಾಗಬೇಕು
ಉಡುಗೊರೆಯು ವೀಳ್ಯ ನಮ್ಮಯ್ಯಗಳಿಗೆ ಬೇಕು
ಮಳೆ ಬಂದು ಬೆಳೆಬಂದು ಇಳೆ ತಣಿಯಲೆಂದು
ತಿಳಿಗೊಳಗಳುಕ್ಕಿ ಗೋವಳು ಕರೆಯಲೆಂದು
ನಳಿನಮುಖಿಯರು ಸುಪುತ್ರರ ಪಡೆಯಲೆಂದು
ಬಣ್ಣ ಬಂಗಾರ ಪುಣ್ಯವು ಹೆಚ್ಚಲೆಂದು..
ಮಾನೌಮಿ ಪದಗಳ ಹಾಡೇವು

ಎಂದು ವಿಧ ವಿಧವಾಗಿ ಹಾಡುತ್ತಿದ್ದರು. ಈ ಬಾಲಕರು ಮೊದಲು ಊರಿನ ದೇವತೆಯನ್ನು ಹೊಗಳಿ ಪೂಜಿಸಿ ಅಲ್ಲಿಂದ ಸಾಮಾನ್ಯವಾಗಿ ಗೌಡರ ಮನೆಗೆ ಹೋಗುತ್ತಿದ್ದರು. ಆಗ ಗೌಡರನ್ನು ಕುರಿತೇ ಹಾಡುತ್ತಿದ್ದರು. ಕೂಲಿಯ ಮಠದಲ್ಲಿ ಮೇಲುಜಾತಿಗಳಿಗೆ ಹೆಚ್ಚಿನ ಪ್ರಾತಿನಿಧ್ಯವಿದ್ದರೂ, ಅಸ್ಪೃಶ್ಯರನ್ನು ಹೊರತುಪಡಿಸಿ ಕೆಲವು ಕೆಳಜಾತಿಯ ಮಕ್ಕಳು ಕಲಿಯುತ್ತಿದ್ದರು.

## ಕಾಳಗದ ಅನುಕರಣೆ

ಶಾಕ್ತ ದೈವಗಳಿಗೂ ಕಾಳಗಕ್ಕೂ ಸಂಬಂಧವಿದೆ. ಪ್ರಾಚೀನ ಶಾಸನಗಳಲ್ಲಿ ಯೋಗಿನಿಯರನ್ನು ಭೈರವಿ ಎಂದು ಕರೆದಿರುವುದೂ ಇದೆ. ಹಾಗಾಗಿ



ಮಂಗಳೂರಿನ ಕುದ್ರೋಳಿ ಗೋಕರ್ಣನಾಥ ದೇವಸ್ಥಾನದಲ್ಲಿ ದಸರೆಗಾಗಿ ಅನಾವರಣಗೊಂಡ ಶಾರದೆ

## ಶಕ್ತಿದೇವತೆಯ ಅರಿವಿನ ಮೂಲ

ದಸರಾ ಅರಿವು, ಜ್ಞಾನ, ಶಿಕ್ಷಣದ ಜತೆ ತಳಕು ಹಾಕಿಕೊಂಡಿರುವುದು ವಿಶೇಷ. 'ಮೌರ್ನಮಿ ಹಾಡು'ಗಳ ಹಿನ್ನೆಲೆ ಈ ರೀತಿಯದ್ದು. ಇದನ್ನು ಸೂಕ್ಷ್ಮವಾಗಿ ನೋಡಿದರೆ ಕಾಳಿಯನ್ನು ಸರಸ್ವತಿಯನ್ನಾಗಿ ಆರಾಧಿಸಿರುವುದು ಕಾಣುತ್ತದೆ. ಮಧ್ಯಭಾರತದಲ್ಲಿ ಭಿಲ್ಲರಲ್ಲಿ ಕಾಳಿನದೈವವು ಸ್ತ್ರೀರೂಪಿಯಾಗಿದೆ. ಕಾಳಿಯು ಕಾಳಿದಾಸನ ನಾಲಗೆಯ ಮೇಲೆ ಅಕ್ಷರ ಬರೆಯುವ ಬಗ್ಗೆ ಕಥೆಗಳಿವೆ. ಶಾಕ್ತದಲ್ಲಿ ಹತ್ತು ದೇವಿಯರನ್ನು 'ದಶವಿದ್ಯಾ' ಎನ್ನುತ್ತಾರೆ. ಇದು ತಂತ್ರಪಂಥದಲ್ಲಿ ಒಂದು ಸಾಧನೆಯ ಹೆಸರೂ ಕೂಡ. ತಾಂತ್ರಿಕ ಬೌದ್ಧರಲ್ಲಿ ತಾರೆಯು ವಿದ್ಯೆಯ ದೇವತೆ. 64 ಯೋಗಿನಿಯರಲ್ಲಿ ತಾರಾ ಮತ್ತು ಸರಸ್ವತಿಯರಿದ್ದಾರೆ. ತಾರೆಯ ಮೂಲರೂಪ ಎನ್ನಲಾಗುವ ಕೊಲ್ಲೂರಿನ ಮೂಕಾಂಬಿಕೆ ಗುಡಿಯಲ್ಲಿ ಮಕ್ಕಳಿಗೆ ಮೊದಲ ಅಕ್ಷರ ಬರೆಸುವ ಪದ್ಧತಿ ಇದೆ. ಕುಶಲಕರ್ಮಿ ವರ್ಗಗಳು ಹಾಡುವ ಈ ಪದಗಳಲ್ಲಿ, ತಮ್ಮ ಶ್ರಮ ಮತ್ತು ಕರ್ಮ ಜ್ಞಾನದ ಹಿಂದೆ ಶಕ್ತಿದೈವದ ಕೃಪೆಯಿರುವ ನಂಬುಗೆಯಿದೆ. ಸಮಾಜಕ್ಕೆ ಅಗತ್ಯವಾದ ಸರಕು ಮತ್ತು ಸೇವೆ ಉತ್ಪಾದಿಸುವ ಪ್ರಕ್ರಿಯೆಯಲ್ಲಿ ಹುಟ್ಟುವ ಜ್ಞಾನಕ್ಕೆ ಇಲ್ಲಿ ಭಕ್ತಿರೂಪ ತೊಡಿಸಲಾಗಿದೆ. ಈ ದೃಷ್ಟಿಯಿಂದ ಮುದ್ದೆಗಮ್ಮಾರರು ಕಾಳಿಯ ಮೇಲೆ ಕಟ್ಟಿರುವ ಹಾಡುಗಳನ್ನು ಗಮನಿಸಬೇಕು.

'ನಾಲಿಗೆಂಬೋದೇ ಲಕ್ಷಾಣ ಕಡಿಯಿಡದೂ ಒದ್ಯಾವ ಕಾಳಮ್ಮನ ಮೊದಲಿಂದಾ'; 'ಹೊತ್ತಿಗೇ ಕೊಟ್ಟೆವ್ವ ಹೊತ್ತೀಲಿ ನಿಂತೆವ್ವಾ'; ವಾಲಿಯ ಕೊಟ್ಟೆವ್ವ ವಾರೀಲಿ ನಿಂತೆವ್ವಾ' ಮುಂತಾದ ವರ್ಣನೆ ಇಲ್ಲಿವೆ. ಇಲ್ಲಿನ ನಾಲಿಗೆ, ಓದು, ಓಲೆ ಹಾಗೂ ಹೊತ್ತಿಗೆಗಳು ವಿದ್ಯೆಯ ಮೌಖಿಕ ಮತ್ತು ಅಕ್ಷರ ರೂಪಗಳೆರಡಕ್ಕೂ ಸೇರಿಕೆಯಾದವು. ದೇವಿಯು ಸಮುದಾಯಕ್ಕೆ ಹೊತ್ತಿಗೆಯನ್ನು ಸರಿಯಾದ ಹೊತ್ತಲ್ಲಿ ಕೊಟ್ಟಿದ್ದಾಳೆ. ಓಲೆಯನ್ನು ಕೈಗಿಟ್ಟು ಪಕ್ಕದಲ್ಲೇ ನಿಂತಿದ್ದಾಳೆ. ಇಲ್ಲಿರುವ ಕಾಲ (ಹೊತ್ತು) ಮತ್ತು ಸ್ಥಳದ(ಪಕ್ಕ) ಚೌಕಟ್ಟಿನಲ್ಲಿ ವಿದ್ಯೆಯ ಕಲ್ಪನೆಯು ಕೇವಲ ಭಕ್ತಿಯಾಗಿಲ್ಲ; ಕಸುಬುದಾರರ ವೃತ್ತಿಜ್ಞಾನ ಮತ್ತು ಪ್ರಾಯೋಗಿಕ ಅನುಭವವನ್ನು ದೈವದ ಜತೆಗೆ ಏಕೀಭವಿಸುತ್ತಿದೆ.

ಕುಶಲಕರ್ಮಿಗಳ ಕುಶಲತೆ ಸ್ತ್ರೀಯರ ನೆರವಿಲ್ಲದೆ ಪೂರ್ಣಗೊಳ್ಳದು. ಹೀಗಾಗಿ ಈ ವರ್ಗಗಳು ವಿದ್ಯೆಯ ಮೂಲವನ್ನು ದೇಹಶ್ರಮ ಸಂಬಂಧವಿಲ್ಲದ ಸರಸ್ವತಿಯಲ್ಲಿ ಕಾಣದೆ, ದೈಹಿಕ–ಬೌದ್ಧಿಕ ಶ್ರಮದ ಜತೆ ಗಾಢ ಲಗತ್ತುಳ್ಳ ಕಾಳಿಯಲ್ಲಿ ಗುರುತಿಸುತ್ತವೆ ಎಂದು ಸಂಸ್ಕೃತಿ ಚಿಂತಕರಾದ ರಹಮತ್ ತರೀಕೆರೆ ಅವರು ವಿಶ್ಲೇಷಿಸುತ್ತಾರೆ. (ತರೀಕೆರೆ, 2017/63–67). ಹೀಗಾಗಿ ಮೌರ್ನಮಿ ಪದಗಳು ಅಕ್ಷರಾಭ್ಯಾಸದ ಜತೆ ಬೆರೆತಿವೆ. ಹೀಗೆ ಶಾಕ್ತೇಯ ದೇವತೆಗಳನ್ನು ಜ್ಞಾನಮೂಲವೆಂಬ ನಂಬಿಕೆಯು ಆಚರಣೆಯ ರೂಪದಲ್ಲಿ ಮುಂದುವರಿದಿದೆ.